# ದ್ವಿಮುಖ ಧೋರಣೆ ಬೇಡ

**ಶಾಸಕಾಂಗ, ಕಾರ್ಯಾಂಗ ವಿಫಲವಾದಾಗ ನ್ಯಾಯಾಂಗ ಕ್ರಿಯಾಶೀಲವಾಗಿ ಕೆಲಸ ಮಾಡಿರುವ ಅನೇಕ ಉದಾಹರಣೆಗಳು ನಮ್ಮ ನಡುವೆ ಇದೆ. ಆದರೆ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಸಹ ದ್ವಿಮುಖ ಧೋರಣೆ ಪ್ರದರ್ಶಿಸಿರುವುದು ವಿಷಾದನೀಯ. ಮೊದಲೇ ಸಾಮಾಜಿಕವಾಗಿ ದಮನಿತವಾದ ಲೈಂಗಿಕ ಅಲ್ಪಸಂಖ್ಯಾತ ಸಮುದಾಯವನ್ನು ಶೋಷಿಸಲು ಈಗ ಕಾನೂನಿನ ಅಸ್ತ್ರವೇ ಸಿಕ್ಕಿದಂತಾಗಿದೆ.**

ಸಲಿಂಗ ಕಾಮ ಅಪರಾಧ ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ವಿವಾದದ ಅಲೆಗಳನ್ನು ಎಬ್ಬಿಸಿದೆ. ಸಲಿಂಗ ಕಾಮವನ್ನು ಅಪರಾಧ ಮುಕ್ತಗೊಳಿಸಿ 2009ರ ಜುಲೈ 2 ರಂದು ದೆಹಲಿ ಹೈಕೋರ್ಟ್ ನೀಡಿದ್ದ ತೀರ್ಪು ಇದರಿಂದ ವಜಾಗೊಂಡಿದೆ. ವಿಶ್ವದ ಅತಿ ದೊಡ್ಡ ಪ್ರಜಾತಂತ್ರ ರಾಷ್ಟ್ರದಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳಿಗೆ ಬಿದ್ದ ಅತಿ ದೊಡ್ಡ ಹೊಡೆತ ಇದು. ಸಹಜವಾಗಿಯೇ ರಾಷ್ಟ್ರದಾದ್ಯಂತ ಈ ತೀರ್ಪಿನ ವಿರುದ್ಧ ವ್ಯಾಪಕ ಅಸಮಾಧಾನ ವ್ಯಕ್ತವಾಗಿದೆ. ಹೀಗಾಗಿ ಸಲಿಂಗಕಾಮವನ್ನು ಅಪರಾಧ ಮುಕ್ತಗೊಳಿಸುವ ಎಲ್ಲ ಆಯ್ಕೆಗಳನ್ನು ಗಂಭೀರವಾಗಿ ಪರಿಶೀಲಿಸುವ ಭರವಸೆಯನ್ನು ಕೇಂದ್ರ ಸರ್ಕಾರ ನೀಡಿದೆ. ಸೋನಿಯಾಗಾಂಧಿ, ರಾಹುಲ್ ಗಾಂಧಿ, ಪಿ.ಚಿದಂಬರಂ ಹಾಗೂ ಕಪಿಲ್ ಸಿಬಲ್ ಅವರಂತಹ ನೇತಾರರು ಬಹಿರಂಗವಾಗಿಯೇ ಸೆಕ್ಷನ್ 377 ವಿರುದ್ಧ ಅಸಮಾಧಾನ ವ್ಯಕ್ತ ಪಡಿಸಿದ್ದಾರೆ.

ಸಲಿಂಗ ಕಾಮವನ್ನು ಅಪರಾಧವಾಗಿಸುವ ಭಾರತೀಯ ದಂಡ ಸಂಹಿತೆಯ 377ನೇ ಸೆಕ್ಷನ್ ರದ್ದು ಪಡಿಸುವ ಅಧಿಕಾರ ಸಂಸತ್‌ಗಷ್ಟೇ ಇದೆ ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಬ್ರಿಟಿಷರು ನಮ್ಮನ್ನಾಳುತ್ತಿದ್ದ ಕಾಲದಲ್ಲಿ 1860ರಲ್ಲಿ ಜಾರಿಯಾದ ಕಾನೂನು ಇದು. ವಿಕ್ಟೋರಿಯನ್ ಯುಗದ ನೈತಿಕ ಮೌಲ್ಯಗಳನ್ನು ಸಾರುವ ಕಾನೂನು ಆಧುನಿಕ ಕಾಲಕ್ಕೆ ಅಪ್ರಸ್ತುತ. ವಸಾಹತುಶಾಹಿಗಳ ನೈತಿಕ ದೃಷ್ಟಿಕೋನವನ್ನೇ ಭಾರತೀಯ ಸಮಾಜದ ಮೇಲೂ ಹೇರುವ ಪ್ರಯತ್ನ ಸರಿಯಲ್ಲ. ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ಕಾನೂನುಗಳಲ್ಲೂ ಬದಲಾವಣೆ ಮಾಡುವುದು ಪ್ರಗತಿಯ ದ್ಯೋತಕ.


ಭಾರತದಲ್ಲಿ ಕನಿಷ್ಠ 10 ಕೋಟಿ ಜನರು ಸಲಿಂಗಿ, ದ್ವಿಲಿಂಗಿ ಮತ್ತು ಲೈಂಗಿಕ ಅಲ್ಪಸಂಖ್ಯಾತ ಸಮುದಾಯಕ್ಕೆ (ಎಲ್‌ಜಿಬಿಟಿ) ಸೇರಿದವರಾಗಿದ್ದಾರೆ ಎಂಬುದು ಒಂದು ಅಂದಾಜು. ವಿಶ್ವದ 76 ರಾಷ್ಟ್ರಗಳಲ್ಲಿ ಸಲಿಂಗ ಕಾಮ ಅಪರಾಧ. ಈಗ ಈ ಪಟ್ಟಿಗೆ ಭಾರತ ಸಹ ಸೇರಿರುವುದರಿಂದ ಈ ಸಂಖ್ಯೆ 77ಕ್ಕೇರಿದೆ. ಈ ಸಂಖ್ಯೆ ಶೂನ್ಯಕ್ಕಿಳಿಯಬೇಕು ಎಂಬುದು ಮಾನವ ಹಕ್ಕುಗಳ ಪ್ರತಿಪಾದಕರ ಆಶಯ. ತಾವು 'ಯಾರು' ಅಥವಾ ತಾವು ಯಾರನ್ನು ಪ್ರೀತಿಸುತ್ತೇವೆಂಬ ಕಾರಣಕ್ಕೆ ಯಾರೂ ತಮ್ಮ ಕುಟುಂಬ, ಸ್ವಾತಂತ್ರ್ಯ ಹಾಗೂ ಘನತೆಯನ್ನು ಕಳೆದುಕೊಳ್ಳುವಂತಹ ಸ್ಥಿತಿ ಸೃಷ್ಟಿಯಾಗಬಾರದು ಎಂಬಂತಹ ಕಳಕಳಿ ಸರಿಯಾದುದು. ವಾಸ್ತವವಾಗಿ ಭಾರತದಲ್ಲಿ ಸಲಿಂಗ ಕಾಮ ಬಹಳ ಹಿಂದಿನಿಂದಲೇ ಅಸ್ತಿತ್ವದಲ್ಲಿದೆ ಎಂಬುದಕ್ಕೆ ಭಾರತದ ಅನೇಕ ದೇವಾಲಯಗಳಲ್ಲಿರುವ ಶಿಲ್ಪಗಳೇ ಸಾಕ್ಷಿ.

ಸಲಿಂಗ ಕಾಮವನ್ನು ಅಪರಾಧ ಎಂದು ಪರಿಗಣಿಸುವುದು ಸಂವಿಧಾನದತ್ತವಾದ ಸಮಾನತೆ ಹಾಗೂ ವೈಯಕ್ತಿಕ ಸ್ವಾತಂತ್ರ್ಯದ ಉಲ್ಲಂಘನೆ. ಈ ವಿಚಾರದಲ್ಲಿ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಬಹಳ ಬದಲಾವಣೆಗಳಾಗುತ್ತಿವೆ. ಇದಕ್ಕೆ ಭಾರತ ಬರೀ ಮೂಕ ಪ್ರೇಕ್ಷಕನಾಗಿರುವುದು ಸಾಧ್ಯವಿಲ್ಲ. ಕಾನೂನು ಜಡವಾಗಬಾರದು. ಕಾಲದ ಅಗತ್ಯಗಳಿಗೆ ಅದು ಸ್ಪಂದಿಸುತ್ತಲೇ ಇರಬೇಕು. ಶಾಸಕಾಂಗ, ಕಾರ್ಯಾಂಗ ವಿಫಲವಾದಾಗ ನ್ಯಾಯಾಂಗ ಕ್ರಿಯಾಶೀಲವಾಗಿ ಕೆಲಸ ಮಾಡಿರುವ ಅನೇಕ ಉದಾಹರಣೆಗಳು ನಮ್ಮ ನಡುವೆ ಇದೆ. ಆದರೆ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಸಹ ದ್ವಿಮುಖ ಧೋರಣೆ ಪ್ರದರ್ಶಿಸಿರುವುದು ವಿಷಾದನೀಯ. ಮೊದಲೇ ಸಾಮಾಜಿಕವಾಗಿ ದಮನಿತವಾದ ಲೈಂಗಿಕ ಅಲ್ಪಸಂಖ್ಯಾತ ಸಮುದಾಯವನ್ನು ಶೋಷಿಸಲು ಈಗ ಕಾನೂನಿನ ಅಸ್ತ್ರವೇ ಸಿಕ್ಕಿದಂತಾಗಿದೆ. ಇತ್ತೀಚಿನ ವರ್ಷಗಳಲ್ಲಷ್ಟೇ, ಲೈಂಗಿಕ ಅಲ್ಪಸಂಖ್ಯಾತ ಸಮುದಾಯದವರನ್ನು ನೋಡುವಂತಹ ಸಾಮಾಜಿಕ ದೃಷ್ಟಿಕೋನಗಳಲ್ಲಿ ಬದಲಾವಣೆಗಳಾಗುತ್ತಿರುವ ಸಕಾರಾತ್ಮಕ ಬೆಳವಣಿಗೆ ಕುಡಿಯೊಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ನ ಈ ತೀರ್ಪು ಭಾರತವನ್ನು ಮತ್ತೆ ಆಧುನಿಕ ಕಾಲದಿಂದ ಹಿಂದಕ್ಕೆ ಒಯ್ಯುವಂತಹದ್ದಾಗಿದೆ.

ಲೈಂಗಿಕ ಅಲ್ಪಸಂಖ್ಯಾತರನ್ನು ಅಪರಾಧಿಗಳಾಗಿ ಕಾಣುವುದರಿಂದ ಎಚ್‌ಐವಿ/ಏಡ್ಸ್ ವೈದ್ಯಕೀಯ ಕಾರ್ಯಕ್ರಮಗಳಲ್ಲಿ ಅವರನ್ನು ತೊಡಗಿಸಿಕೊಳ್ಳುವುದು ಕಷ್ಟವಾಗುತ್ತದೆ. ಇದು ಸಾರ್ವಜನಿಕ ಆರೋಗ್ಯದ ಮೇಲೆ ಬೀರಬಹುದಾದ ಪರಿಣಾಮಗಳನ್ನು ನಿರ್ಲಕ್ಷಿಸಲಾಗದು.

ಸಲಿಂಗ ಕಾಮವನ್ನು ಅಪರಾಧಮುಕ್ತಗೊಳಿಸುವ ವಿಚಾರದಲ್ಲಿ ಕೇಂದ್ರದ ಲಘು ಧೋರಣೆಯನ್ನು ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಈಗಲಾದರೂ ಕೇಂದ್ರ ಸರ್ಕಾರ ಮಾನವ ಘನತೆಗೆ ಸಂಬಂಧಿಸಿದ ಇಂತಹ ವಿಚಾರದಲ್ಲಿ ಲಘು ಧೋರಣೆ ಪ್ರದರ್ಶಿಸದೆ ಮುಂದಿನ ಪರಿಹಾರ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು.

■ ಸಿ.ಜಿ.ಮಂಜುಳಾ


ಈಶ್ವರ್